ದಿನಾಂಕ:20/06/2017 ರಂದು ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ನಾಗಮಂಗಲ ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು / ನೌಕರರು.

ಶ್ರೀ/ಶ್ರೀಮತಿ/ಕುಮಾರಿ:

1) ಎ.ಎಸ್.ರವಿಶಂಕರ್ : ಪ್ರಭಾರ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ವೃತ್ತ.
2) ಇ. ರವಿಶಂಕರ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂಡ್ಯ ವೃತ್ತ.
3) ಶ್ರೀನಿವಾಸ : ಉಪಲೆಕ್ಕ ನಿಯಂತ್ರಣಾಧಿಕಾರಿ, ಆಂ.ಪ., ಮಂಡ್ಯ ವೃತ್ತ.
4) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
5) ಮರಿಸ್ವಾಮಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ
6) ಜಗದೀಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆಳೂರು ಉಪವಿಭಾಗ
7) ಜೆ.ವಿ.ರಾಮಚಂದ್ರ : ಲೆಕ್ಕಾಧಿಕಾರಿಗಳು, ನಾಗಮಂಗಲ ವಿಭಾಗ
8) ಮಹಾದೇವಪ್ಪ : ಲೆಕ್ಕಾಧಿಕಾರಿ, ಆಂ.ಪ. ಪಾಂಡವಪುರ ವಿಭಾಗ
9) ಎಸ್.ಜಿ. ಹರೀಶ್ : ಸಹಾಯಕ ಇಂಜಿನಿಯರ್ (ತಾಂ), ಬೆಳ್ಳೂರು ಉಪವಿಭಾಗ
10) ಜಿ.ಶ್ರೀನಿವಾಸಲುನಾಯ್ಡು : ಸಹಾಯಕ ಇಂಜಿನಿಯರ್ (ತಾಂ), ನಾಗಮಂಗಲ ವಿಭಾಗ
11) ಡಿ.ನಟರಾಜು : ಪ್ರಭಾರ ಸಹಾಯಕ ಇಂಜಿನಿಯರ್(ವಿ),ನಾಗಮಂಗಲ ಶಾಖೆ
12) ಎ.ಟಿ.ಅಶೋಕ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಚೀಣ್ಯ ಶಾಖೆ
13) ನವೀನ್ ಕುಮಾರ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ದೇವಲಾಪುರ ಶಾಖೆ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ನಾಗಮಂಗಲ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ / ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಸದರಿ ಸಭೆಯಲ್ಲಿ ಹಾಜರಿದ್ದ ವಿದ್ಯುತ್ ಗ್ರಾಹಕರು ಮೌಖಿಕವಾಗಿ ತಿಳಿಸಿದ/ಲಿಖಿತ ಮನವಿಗಳಲ್ಲಿ ಉಲ್ಲೇಖಿಸಿರುವ ವಿದ್ಯುತ್ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚಿಸಿ ಸಭೆಯಲ್ಲಿ ತೆಗೆದುಕೊಂಡ/ ತೆಗೆದುಕೊಳ್ಳಬೇಕಾದ ತೀರ್ಮಾನಗಳು ಈ ಕೆಳಕಂಡಂತೆ ಇರುತ್ತದೆ.

**1)ಶ್ರೀ. ಮಂಜುನಾಥ, ಚೋಳೇನಹಳ್ಳಿ ಗ್ರಾಮ ಮೊಬೈಲ್ ನಂ: 9483838374**

ದೂರು:- ಚೋಳೇನಹಳ್ಳಿ ಹಾಗೂ ಸುತ್ತಮುತ್ತಲ ಗ್ರಾಮಗಳಿಗೆ ವೋಲ್ಟೇಜ್ ಸಮಸ್ಯೆ ( ಲೋ ವೋಲ್ಟೇಜ್) ಇರುವುದಾಗಿ ತಿಳಿಸಿದ್ದು, ಸೂಕ್ತ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವಂತೆ ಕೋರಿರುತ್ತಾರೆ.

ಕ್ರಮ:- ಸದರಿ ಗ್ರಾಮಗಳಿಗೆ ವಿದ್ಯುತ್ ಸರಬರಾಜಾಗುವ ಎಫ್-7 ರೂರಲ್ ಮಾರ್ಗದಲ್ಲಿ ವಾಹಕ ಬದಲಾವಣೆ ಮಾಡಲು ಅಂದಾಜು ಪಟ್ಟಿ ಸಲ್ಲಿಸಿದ್ದು, ಹೆಚ್ಚು ಸಾಮರ್ಥ್ಯದ ವಾಹಕ ಬದಲಾವಣೆ ನಂತರ ವೋಲ್ಟೇಜ್ ಅಭಿವೃದ್ಧಿಯಾಗುವುದಾಗಿ ತಿಳಿಸಲಾಯಿತು. 11 ಕೆವಿ ಲಿಂಕ್ ಲೈನ್ ಅಳವಡಿಸಿ ಹಾಲಿ ಇರುವ 11 ಕೆವಿ ಮಾರ್ಗವನ್ನು 2 ಫೀಡರ್‌ಗಳಾಗಿ ವಿಭಜಿಸಲು ಒಂದು ವಾರದೊಳಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಶಾಖಾಧಿಕಾರಿ ನಾಗಮಂಗಲ ರವರಿಗೆ ಸೂಚಿಸಲಾಯಿತು.

**2)ಶ್ರೀ. ನಿಂಗಪ್ಪ, ಗೊಗ್ಗನಕೊಪ್ಪಲು ಮೊಬೈಲ್ ನಂ: 9448977599**

ದೂರು:- ಗ್ರಾಮದ ಐಪಿ, ಕುಡಿಯುವ ನೀರು ಸರಬರಾಜು ಮತ್ತು ಗ್ರಾಮ ವ್ಯಾಪ್ತಿಯ 100 ಕೆವಿಎ ಪರಿವರ್ತಕ ವಿಫಲವಾಗಿದ್ದು ಬದಲಾಯಿಸಲು ಕೋರಿರುತ್ತಾರೆ. ಸದರಿ ಪರಿವರ್ತಕದಲ್ಲಿ 14 ಸಂಖ್ಯೆ ಐಪಿ ಸೆಟ್ ಇದ್ದು ಅಕ್ರಮ ಸಕ್ರಮ ಯೋಜನೆಯಲ್ಲಿ ಹಣಪಾವತಿಸಿರುವ ಫಲಾನುಭವಿಗಳಿಗೆ ಪರಿವರ್ತಕ ಅಳವಡಿಸುವಂತೆ ಕೋರಿರುತ್ತಾರೆ.

ಕ್ರಮ:- ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿಸಿರುವ ಫಲಾನುಭವಿಗಳ ಪಂಪ್ ಸೆಟ್ ಸ್ಥಾವರಗಳಿಗೆ ಮೂಲಭೂತಸೌಕರ್ಯ ಕಲ್ಪಿಸಲು ಅವಾರ್ಡ್ ನೀಡಲಾಗಿದ್ದು ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದಾಗಿ ತಿಳಿಸಿರುತ್ತಾರೆ. ವಿಫಲಗೊಂಡ ಪರಿವರ್ತಕವನ್ನು ನಾಳೆದಿನ ಬದಲಾಯಿಸಲು ಶಾಖಾಧಿಕಾರಿ ನಾಗಮಂಗಲ ರವರಿಗೆ ಸೂಚಿಸಲಾಯಿತು.

**3)ಶ್ರೀ. ಡಿ.ರಾಮೇಗೌಡ, ಕಾಚೇನಹಳ್ಳಿ ಮೊಬೈಲ್ ನಂ: 9964012489.**

ದೂರು:- ವಿಫಲಗೊಂಡಿರುವ 100 ಕೆವಿಎ ಪರಿವರ್ತಕವನ್ನು ಬದಲಾಯಿಸುವಂತೆ ಕೋರಿರುತ್ತಾರೆ. ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸಲು ಶ್ರೀ.ಶಿವಕುಮಾರ್ ಮಾರ್ಗದಾಳುರವರು ಹಣ ಪಡೆದಿರುವುದಾಗಿ ತಿಳಿಸಿ ಪರಿಹರಿಸುವಂತೆ ಕೋರಿರುತ್ತಾರೆ.

ಕ್ರಮ:- ಲಿಖಿತವಾಗಿ ದೂರನ್ನು ನೀಡಿದರೆ ಸದರಿ ನೌಕರರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಮಾರ್ಗದಾಳುವಿನಿಂದ ವಿವರ ಪಡೆದು ಹಣವನ್ನು ಹಿಂತಿರುಗಿಸಲು ಕ್ರಮ ವಹಿಸುವಂತೆ ಶಾಖಾಧಿಕಾರಿ ನಾಗಮಂಗಲ ರವರಿಗೆ ಸೂಚಿಸಲಾಯಿತು.

ದೂರು:- ಅಕ್ರಮ ನೀರಾವರಿ ಪಂಪ್‌ಸೆಟ್ ಸ್ಥಾವರಗಳನ್ನು ಸಕ್ರಮಗೊಳಿಸಲು ಶುಲ್ಕವನ್ನು ಕಂತಿನ ರೂಪದಲ್ಲಿ ಪಾವತಿಸಲು ಅನುವು ಮಾಡಿಕೊಡುವಂತೆ ಹಾಗೂ ವಾಹಕ ಅಳವಡಿಸಿ ದಿನದ 24 ಗಂಟೆ ವಿದ್ಯುತ್ ಸರಬರಾಜು ನೀಡುವಂತೆ ಕೋರಿರುತ್ತಾರೆ.

ಕ್ರಮ:- ಸರ್ಕಾರದ ಆದೇಶದ ಅನ್ವಯ ಪ್ರಸ್ತುತ ಇದಕ್ಕೆ ಅವಕಾಶ ಇರುವುದಿಲ್ಲ ಎಂದು ಮನವರಿಕೆ ಮಾಡಿಕೊಟ್ಟಿರುತ್ತಾರೆ.

**<u>4) ಶ್ರೀ ಗೋಪಾಲಕೃಷ್ಣ, ಅರಳಕೆರೆ ಮೊಬೈಲ್ ನಂ:8277096[illegible]65</u>**
ದೂರು:- ವಿದ್ಯುತ್ ಅಡಚಣೆಗಳು ಹೆಚ್ಚಾಗಿದ್ದು ಸೂಕ್ತ ಪ್ರಮಾಣದ ವಿದ್ಯುತ್ ಸರಬರಾಜು ಮಾಡುವಂತೆ ಕೋರಿರುತ್ತಾರೆ.

ಕ್ರಮ:- ಸರ್ಕಾರ ನಿಗದಿಪಡಿಸಿರುವಂತೆ ಪ್ರಸ್ತುತ ಐಪಿ ಸ್ಥಾವರಗಳಿಗೆ ಪ್ರತಿದಿನ 7 ಗಂಟೆ, ರೂರಲ್ ಮಾರ್ಗಗಳಿಗೆ 7 ಗಂಟೆ 3 ಫೇಸ್ 9 ಗಂಟೆ 1 ಫೇಸ್ ಒಟ್ಟು 16 ಗಂಟೆ ಹಾಗೂ ನಗರ /ಎನ್.ಜೆ.ವೈ ಮಾರ್ಗಗಳಿಗೆ 22 ರಿಂದ 24 ಗಂಟೆ ವಿದ್ಯುತ್ ಸರಬರಾಜು ನೀಡಿರುತ್ತಿರುವುದಾಗಿ ತಿಳಿಸಿದರು.

ದೂರು:-11 ಕೆವಿ & ಎಲ್.ಟಿ ಮಾರ್ಗದಲ್ಲಿ ವಿದ್ಯುತ್ ತಂತಿಗಳು ತೀರ ಕೆಳಮಟ್ಟದಲ್ಲಿದ್ದು, ಜಂಪ್‌ಗಳು ಹಾಳಾಗಿದ್ದು ಸೂಕ್ತ ನಿರ್ವಹಣೆ ಮಾಡುವಂತೆ ಕೋರಿರುತ್ತಾರೆ.

ಕ್ರಮ:- DDUGVY & IPDS ಯೋಜನೆಯಡಿಯಲ್ಲಿ ಅಂತರ ಹೆಚ್ಚು ಇರುವ ಕಡೆ ಮಧ್ಯಂತರ ಕಂಬ ಅಳವಡಿಸುವುದು, ವಾಹಕ ಬದಲಾವಣೆ ಮಾಡುವ ಕಾಮಗಾರಿಗೆ ಅನುಮೋದನೆ ನೀಡಿದ್ದು ದಿನಾಂಕ:22-6-2017 ರಂದು ಕಾಮಗಾರಿ ಪ್ರಾರಂಭ ಮಾಡಲಾಗುವುದೆಂದು ತಿಳಿಸಿರುತ್ತಾರೆ.

ದೂರು:- ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿ ಮಾಡಿರುವ ಗ್ರಾಹಕರಿಗೆ ಪರಿವರ್ತಕ ಅಳವಡಿಸುವಂತೆ ಕೋರಿರುತ್ತಾರೆ.

ಕ್ರಮ:- ಈಗಾಗಲೇ ಟೆಂಡರ್ ನೀಡಲಾಗಿದ್ದು ಶೀಘ್ರವಾಗಿ ಸಕ್ರಮಗೊಂಡಿರುವ ಎಲ್ಲಾ ನೀರಾವರಿ ಪಂಪ್‌ಸೆಟ್ ಸ್ಥಾವರಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲಾಗುವುದು ಎಂದು ತಿಳಿಸಿರುತ್ತಾರೆ.

ದೂರು:- ಜನಸಂಪರ್ಕ ಸಭೆಯನ್ನು ಆಯೋಜಿಸಿರುವ ಬಗ್ಗೆ ಸೂಕ್ತ ಮಾಹಿತಿ ಇರುವುದಿಲ್ಲ. ವ್ಯಾಪ್ತಿಗೆ ಒಳಪಡುವ ಎಲ್ಲಾ ಗ್ರಾಮ ಪಂಚಾಯಿತಿ ಕಛೇರಿಗಳಲ್ಲಿ ಮಾಹಿತಿಗಾಗಿ ಕರಪತ್ರ ಅಂಟಿಸಬೇಕೆಂದು ಕೋರಿರುತ್ತಾರೆ.

ಕ್ರಮ:- ಎಲ್ಲಾ ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದ್ದು, ಉಪವಿಭಾಗ ವ್ಯಾಪ್ತಿಯಲ್ಲಿ ಬ್ಯಾನರ್‌ಗಳನ್ನು ಪ್ರಚಾರಪಡಿಸಿದ್ದು, ಎಲ್ಲಾ ಶಾಖಾ ಕಛೇರಿಗಳಲ್ಲಿ ಕರಪತ್ರ ಅಂಟಿಸಿರುವುದಾಗಿ ತಿಳಿಸಿದ್ದು ಮುಂದಿನ ದಿನಗಳಲ್ಲಿ ಮತ್ತಷ್ಟು ಪ್ರಚಾರ ನೀಡುವುದಾಗಿ ತಿಳಿಸಿರುತ್ತಾರೆ.

ದೂರು:- ಹರದನಹಳ್ಳಿ ವಿದ್ಯುತ್ ಕೇಂದ್ರದಿಂದ ವಿದ್ಯುತ್ ಸರಬರಾಜಾಗುತ್ತಿದ್ದು, ಗ್ರಾಮದಿಂದ ಬಹಳ ದೂರ ಇರುವ ಕಾರಣ ವೋಲ್ಟೇಜ್ ಸಮಸ್ಯೆ ಇರುವುದಾಗಿ ತಿಳಿಸಿರುತ್ತಾರೆ.

ಕ್ರಮ:- ಹರದನಹಳ್ಳಿ ವಿದ್ಯುತ್ ಕೇಂದ್ರದಲ್ಲಿ ಹೆಚ್ಚುವರಿ 12.5 MVA ಸಾಮರ್ಥ್ಯದ ಪರಿವರ್ತಕವನ್ನು ಅಳವಡಿಸುವ ಕಾರ್ಯ ಪ್ರಾರಂಭವಾಗಿದ್ದು, ಶೀಘ್ರವಾಗಿ ಪೂರ್ಣಗೊಳ್ಳುವುದು. ಕಸಲಗೆರೆ ಗ್ರಾಮದಲ್ಲಿ ನೂತನ ವಿದ್ಯುತ್ ಕೇಂದ್ರವನ್ನು ಮಂಜೂರು ಮಾಡಿದ್ದು ಶೀಘ್ರ ಕಾಮಗಾರಿ ಪ್ರಾರಂಭವಾಗುವುದಾಗಿ ತಿಳಿಸಿರುತ್ತಾರೆ. ನಂತರ ಹೆಚ್ಚುವರಿ ಫೀಡರ್‌ಗಳನ್ನು ನಿರ್ಮಿಸುವುದರಿಂದ ವೋಲ್ಟೇಜ್ ಸಮಸ್ಯೆ ನಿವಾರಣೆಯಾಗುವುದಾಗಿ ತಿಳಿಸಿರುತ್ತಾರೆ.

**<u>5) ಶ್ರೀ ಪ್ರಕಾಶ ತಟ್ಟಹಳ್ಳಿ ಮೊಬೈಲ್ ನಂ:9980290564</u>**
ದೂರು:- ಅಕ್ರಮ ಸಕ್ರಮ ಯೋಜನೆಯಲ್ಲಿ ಹಣ ಪಾವತಿಸಿದ್ದು 2 ವರ್ಷವಾಗಿದ್ದರೂ ಪರಿವರ್ತಕ ಅಳವಡಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಕ್ರಮ:- ಸದರಿ ಕಾಮಗಾರಿಗೆ ಈಗಾಗಲೇ ಅವಾರ್ಡ್ ನೀಡಿದ್ದು, ಶೀಘ್ರ ಕಾಮಗಾರಿ ನಿರ್ವಹಿಸಲು ಕ್ರಮ ವಹಿಸುವಂತೆ ಶಾಖಾಧಿಕಾರಿ ದೇವಲಾಪುರ ರವರಿಗೆ ಸೂಚಿಸಿರುತ್ತಾರೆ.

**6)ಶ್ರೀ ನಂಜುಂಡೇಗೌಡ ಅಂಚೆಚಿಟ್ಟನಹಳ್ಳಿ ಮೊಬೈಲ್ ನಂ: 9740163915**

ದೂರು:- 63 ಕೆವಿಎ ಪರಿವರ್ತಕ ವಿಫಲಗೊಂಡಿದ್ದು, ಬದಲಾಯಿಸಲು ಮಾರ್ಗದಾಳುವಿಗೆ ತಿಳಿಸಿದ್ದು, ಪರಿವರ್ತಕ ಬದಲಿಸಿರುವುದಿಲ್ಲ ಆದ್ದರಿಂದ ಕೂಡಲೇ ಪರಿವರ್ತಕ ಬದಲಾಯಿಸುವಂತೆ ಕೋರಿರುತ್ತಾರೆ.

ಕ್ರಮ:- ಈ ಬಗ್ಗೆ ಶಾಖಾಧಿಕಾರಿ ನಾಗಮಂಗಲರವರನ್ನು ವಿಚಾರಿಸಲಾಗಿ ತಮ್ಮ ಗಮನಕ್ಕೆ ಬಂದಿರುವುದಿಲ್ಲ ಈ ಬಗ್ಗೆ ಯಾರೂ ದೂರನ್ನು ಸಲ್ಲಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಕೂಡಲೆ ಅಂದಾಜುಪಟ್ಟಿ ಸಲ್ಲಿಸಿ, ದಿ:22/6/2017 ರಂದು ಪರಿವರ್ತಕವನ್ನು ಬದಲಾಯಿಸುವಂತೆ ಸೂಚಿಸಿರುತ್ತಾರೆ.

ದೂರು: ವಿದ್ಯುತ್ ತಂತಿಗಳು ಕೆಳಮಟ್ಟದಲ್ಲಿದ್ದು, ತಂತಿಗಳಿಗೆ ತಾಗುವ ಮರ ಗಿಡಗಳ ಕೊಂಬೆಗಳನ್ನು ಕತ್ತರಿಸಿರುವುದಿಲ್ಲ. ಸೂಕ್ತ ನಿರ್ವಹಣೆ ಮಾಡುವಂತೆ ಕೋರಿರುತ್ತಾರೆ.

ಕ್ರಮ:- ಹಾಲಿ ಇರುವ ಮಾರ್ಗದಾಳು & ನೂತನವಾಗಿ ನೇಮಕಗೊಂಡಿರುವ ಕಿರಿಯ ಮಾರ್ಗದಾಳುಗಳಿಂದ ಸದರಿ ಕಾರ್ಯವನ್ನು ನಿರ್ವಹಿಸುವಂತೆ ನಾಗಮಂಗಲ ಶಾಖಾಧಿಕಾರಿಗಳಿಗೆ ಸೂಚಿಸಿರುತ್ತಾರೆ.

**7) ಶ್ರೀ ನಂಜೇಗೌಡ ಪಡುವಲಪಟ್ಟಣ ಮೊಬೈಲ್ ನಂ: 8970998287**

ದೂರು:- ಗ್ರಾಮದಲ್ಲಿ ಕುಡಿಯುವ ನೀರು ಸ್ಥಾವರಕ್ಕೆ ಪರಿವರ್ತಕವನ್ನು ಅಳವಡಿಸುವಂತೆ ಕೋರಿರುತ್ತಾರೆ.

ಕ್ರಮ :- ಟೋಟಲ್ ಟರ್ನ್ ಕೀ ಅಡಿಯಲ್ಲಿ ಅಂದಾಜು ಪಟ್ಟಿ ಸಲ್ಲಿಸಿದ್ದು ಅಂದಾಜುಪಟ್ಟಿ ಮೊತ್ತವು 5 ಲಕ್ಷಕ್ಕಿಂತ ಹೆಚ್ಚಾಗಿರುವ ಕಾರಣ ವೃತ್ತ ಕಛೇರಿಯಿಂದ ಟೆಂಡರ್ ನೀಡಿ ಶೀಘ್ರ ಕಾಮಗಾರಿ ಪೂರ್ಣಗೊಳಿಸಲಾಗುವುದಾಗಿ ತಿಳಿಸಿರುತ್ತಾರೆ.

**8) ಶ್ರೀ ರವಿಗೌಡ ಕೆಬ್ಬಹಳ್ಳಿ ಮೊಬೈಲ್ ನಂ:94824[illegible]2268**

ದೂರು:- ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ವಿದ್ಯುತ್ ತಂತಿಗಳು ಜೋತುಬಿದ್ದಿದ್ದು ಕೆಳಮಟ್ಟದಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ.

ಕ್ರಮ:- ಸ್ಥಳ ಪರಿಶೀಲಿಸಿ, ಅಂದಾಜುಪಟ್ಟಿ ಸಲ್ಲಿಸಿ ಮಧ್ಯಂತರ ಕಂಬ ಅಳವಡಿಸುವಂತೆ ಶಾಖಾಧಿಕಾರಿ ಚೀಣ್ಯ ರವರಿಗೆ ಸೂಚನೆ ನೀಡಲಾಯಿತು. ಅವಶ್ಯವಿರುವ ಎಲ್ಲಾ ಕಡೆ ಮಧ್ಯಂತರ ಕಂಬ ಅಳವಡಿಸಲು ಕ್ರಮ ವಹಿಸುವಂತೆ ಸೂಚಿಸಲಾಯಿತು.

ದೂರು:- ವಿಭಾಗೀಯ ಉಗ್ರಾಣದಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು ಸಾಮಗ್ರಿಗಳು ಲಭ್ಯವಿರುವುದಿಲ್ಲ ಆದ್ದರಿಂದ ಸಾಮಾಗ್ರಿಗಳನ್ನು ಒದಗಿಸಿಕೊಡುವಂತೆ ಕೋರಿರುತ್ತಾರೆ.

ಕ್ರಮ:- ಹಾಲಿ ಇರುವ ವಾಹಕ & ಸಾಮಾಗ್ರಿಗಳನ್ನು ಹೊಸ ಗೃಹಬಳಕೆ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಉಪಯೋಗಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿರುತ್ತಾರೆ.

**9) ಶ್ರೀ ಪ್ರಕಾಶ್ ಕೆ.ಎಸ್. ಕುದಗಬಾಳು ಮೊಬೈಲ್ ನಂ: 9731107047**

ದೂರು:- ಜೋತು ಬಿದ್ದಿರುವ ಕೆಳಮಟ್ಟದಲ್ಲಿರುವ ತಂತಿಗಳನ್ನು ಸರಿಪಡಿಸುವಂತೆ & ಕಬ್ಬಿಣದ ಕಂಬಗಳನ್ನು ಬದಲಾಯಿಸುವಂತೆ ಕೋರಿರುತ್ತಾರೆ.

ಕ್ರಮ:- ಮಧ್ಯಂತರ ಕಂಬ ಅಳವಡಿಸಲು & ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕ್ರಮ ವಹಿಸುವಂತೆ ಶಾಖಾಧಿಕಾರಿ ದೇವಲಾಪುರ ರವರಿಗೆ ಸೂಚಿಸಿರುತ್ತಾರೆ.

ದೂರು:- ಬೀದಿದೀಪದ ಬಲ್ಬುಗಳು & ಡಿ.ಪಿ ಸ್ವಿಚ್‌ಗಳು ಸುಟ್ಟಿದ್ದು ಬದಲಿಸುವಂತೆ ಕೋರಿರುತ್ತಾರೆ.

ಕ್ರಮ:- ಸದರಿ ನಿರ್ವಹಣೆ ಕಾರ್ಯವನ್ನು ಗ್ರಾಮ ಪಂಚಾಯ್ತಿ ವತಿಯಿಂದ ನಿರ್ವಹಿಸಬೇಕಿದ್ದು ಗ್ರಾಮ ಪಂಚಾಯ್ತಿ ಕಛೇರಿಗೆ ದೂರು ನೀಡುವಂತೆ ತಿಳಿಸಿರುತ್ತಾರೆ.

ದೂರು:- ನೇರ ಸಂಪರ್ಕದಲ್ಲಿರುವ ಬೀದಿ ದೀಪಗಳಿಗೆ ಪ್ರತ್ಯೇಕ ಮಾರ್ಗವನ್ನು ರಚಿಸಿ, ವಿದ್ಯುತ್ ಪೋಲಾಗುವುದನ್ನು ತಡೆಯುವಂತೆ ಕೋರಿರುತ್ತಾರೆ.

ಕ್ರಮ:- ಗ್ರಾಮ ಪಂಚಾಯಿತಿ ವತಿಯಿಂದ ಅರ್ಜಿಯನ್ನು ಸಲ್ಲಿಸುವಂತೆ ಸೂಚಿಸಿ, ನಿಗಮದ ನಿಯಮಾನುಸಾರ ಕ್ರಮ ವಹಿಸುವುದಾಗಿ ತಿಳಿಸಿರುತ್ತಾರೆ.

**<u>10) ಶ್ರೀ ತಮ್ಮಣ್ಣಗೌಡ ನಾಗಮಂಗಲ ಮೊಬೈಲ್ ನಂ: 9141734225</u>**

ದೂರು:- ಸೆಸ್ಕ್ ವತಿಯಿಂದ ಮಾರಾಟ ಮಾಡಿದ್ದ ಬಲ್ಬ್‌ಗಳನ್ನು ಖರೀದಿಸಿದ್ದು, ಇದರಲ್ಲಿ ಕೆಲವು ಬಲ್ಬ್‌ಗಳು ಕೆಟ್ಟಿದ್ದು, ಕೆಟ್ಟಿರುವ ಬಲ್ಬ್‌ಗಳನ್ನು ಬದಲಾವಣೆ ಮಾಡಿಕೊಡುವಂತೆ ಮನವಿ ಮಾಡಿರುತ್ತಾರೆ.

ಕ್ರಮ:- LED ಬಲ್ಬ್‌ಗಳ ವಾರಂಟಿ ಅವಧಿ 3 ವರ್ಷಗಳವರೆಗೆ ಇದ್ದು, ಆರ್.ಆರ್.ಸಂಖ್ಯೆಯನ್ನು ನಮೂದಿಸಿ ಅರ್ಜಿ ನೀಡುವಂತೆ ಸೂಚಿಸಲಾಯಿತು. ಎಲ್‌ಇಡಿ ಬಲ್ಬ್‌ಗಳ ವಿತರಣೆ ಹಾಗೂ ಬದಲಾವಣೆ ಬಗ್ಗೆ ನಿಗಮದಿಂದ ವಿತರಣೆಯಾಗಿರುವ DWA ಪ್ರಕಾರ ಅಗತ್ಯ ಕ್ರಮಕ್ಕಾಗಿ ಏಜೆನ್ಸಿಯವರಿಗೆ ಪತ್ರ ಬರೆಯುವುದಾಗಿ ತಿಳಿಸಲಾಯಿತು.

ದೂರು:- ಬಿಂಡಿಗನವಿಲೆ ಹೋಬಳಿಯಲ್ಲಿರುವ ತಮ್ಮ ಜಮೀನಿನಲ್ಲಿ ಹಾದು ಹೋಗಿರುವ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಲು ಎಬಿಸಿ ಕೇಬಲ್ ಅಳವಡಿಸಲು ಅಂದಾಜು ಮಾಡಲಾಗಿದ್ದು ಒಟ್ಟು ಅಂದಾಜು ಮೊತ್ತವು 1.5 ಲಕ್ಷ ಆಗಿರುವುದರಿಂದ, ಕೇಬಲ್ ಇಲ್ಲದೆ ಅಂದಾಜುಪಟ್ಟಿ ತಯಾರಿಸಿ ಮೊತ್ತವನ್ನು ಕಡಿಮೆ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಕ್ರಮ:- ಸದರಿ ಸ್ಥಳವನ್ನು ಮತ್ತೊಮ್ಮೆ ಪರಿಶೀಲಿಸಿ, ಅಂದಾಜುಪಟ್ಟಿ ತಯಾರಿಸುವಂತೆ ಸಂಬಂಧಿಸಿದ ಶಾಖಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿರುತ್ತಾರೆ. ಸದರಿ ವಿಷಯವು ಬೆಳ್ಳೂರು ಉಪವಿಭಾಗ ವ್ಯಾಪ್ತಿಗೆ ಒಳಪಟ್ಟಿದ್ದು, ದಿನಾಂಕ:22/6/2017 ರಂದು ಬೆಳ್ಳೂರು ಉಪವಿಭಾಗ ಕಛೇರಿಯ ಆವರಣದಲ್ಲಿ ಜನಸಂಪರ್ಕ ಸಭೆಯನ್ನು ನಡೆಸಲಿದ್ದು ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲಾಗುವುದಾಗಿ ತಿಳಿಸಿದರು.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನ ಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಲೆಕ್ಕಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 1:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

**ಮೊಮೊ ಸಂಖ್ಯೆ:** ಕಾನಿಇಂ(ವಿ)/ಸಇಂ(ತಾ)/ನಾ/17-18/ 1100-108 ದಿನಾಂಕ: 22-6-17

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.